# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 765
ಉತ್ತರಿಸುವ ದಿನಾಂಕ : 10.03.2020
ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವವರು : ಗಣಿ ಮತ್ತು ಭೂವಿಜ್ಞಾನ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 5 ವರ್ಷದಲ್ಲಿ ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತ (ಎಂ.ಎಂ.ಎಲ್)ಯಿಂದ ಇದುವರೆವಿಗೂ ರಾಜ್ಯದಲ್ಲಿ ಎಷ್ಟು ಕಂಪನಿಗಳಿಗೆ ಗಣಿಗಾರಿಕೆ ಗುತ್ತಿಗೆ ನೀಡಲಾಗಿದೆ; ಯಾವ ಯಾವ ಖನಿಜಗಳನ್ನು ಹೊರತೆಗೆಯಲು ಅನುಮತಿ ನೀಡಲಾಗಿದೆ; (ಈ ಬಗ್ಗೆ ಜಿಲ್ಲಾವಾರು ವಿಸ್ತೀರ್ಣವಾರು ಮತ್ತು ಗುತ್ತಿಗೆ ಅವಧಿ ಒಳಗೊಂಡಂತೆ ಸಂಪೂರ್ಣ ಮಾಹಿತಿ ನೀಡುವುದು)</td><td>ಕೆ.ಎಸ್.ಎಂ.ಸಿ.ಎಲ್, ಬೆಂಗಳೂರು, ಈ ಸಂಸ್ಥೆಯು ತನ್ನ ಅಧೀನದಲ್ಲಿರುವ ಗ್ರಾನೈಟ್ ಶಿಲಾ ಗಣಿಗಳಲ್ಲಿ ಶಿಲಾದಿಮ್ಮೆಗಳನ್ನು ಉತ್ಪಾದನೆ ಮಾಡಲು ಇ-ಟೆಂಡರ್ ಮೂಲಕ ಕಳೆದ ಐದು ವರ್ಷಗಳಲ್ಲಿ 01 ಕಂಪನಿಯ ಜೊತೆ ಗುತ್ತಿಗೆ ಕರಾರು ಮಾಡಿಕೊಂಡಿದ್ದು, ಗುತ್ತಿಗೆವಾರು / ಜಿಲ್ಲಾವಾರು ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.<br>ಸಂಸ್ಥೆಯ ಅಧೀನದಲ್ಲಿರುವ ಕಬ್ಬಿಣದ ಅದಿರು ಗಣಿಗಳಲ್ಲಿ ಕಳೆದ 5 ವರ್ಷಗಳಲ್ಲಿ ಇ-ಟೆಂಡರ್ ಮೂಲಕ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಅದಿರನ್ನು ಉತ್ಪಾದಿಸಲಾಗಿದ್ದು, ವಿವರಗಳನ್ನು ಅನುಬಂಧ – 2 ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಲೀಸ್ ಪಡೆದ ಕಂಪನಿಗಳು ಇಲ್ಲಿಯವರೆಗೆ, ಎಷ್ಟು ಪ್ರಮಾಣದ ಖನಿಜವನ್ನು ಹೊರತೆಗೆಯಲಾಗಿದೆ; ಹಾಗೂ ಕಳೆದ 5 ವರ್ಷದಿಂದ ಎಂ.ಎಂ.ಎಲ್‌ಗೆ ಎಷ್ಟು ಆದಾಯ ಬಂದಿರುತ್ತದೆ;</td><td>ಸಂಸ್ಥೆಯು ತನ್ನ ಅಧೀನದಲ್ಲಿರುವ ಗಣಿ / ಶಿಲಾಗಣಿ ಗುತ್ತಿಗೆಗಳನ್ನು ಲೀಸ್‌ಗೆ ನೀಡಿರುವುದಿಲ್ಲ. ಆದರೆ ಉತ್ಪಾದನೆ ಮಾಡಲು ಶಿಲಾ ಗಣಿಗಳನ್ನು ನೀಡಲಾಗಿದ್ದು, ಗುತ್ತಿಗೆ ಕರಾರಿನಂತೆ ಗುತ್ತಿಗೆದಾರರು ಮಾರ್ಚ್ – 2019 ರ ವರೆಗೆ ಶಿಲಾ ದಿಮ್ಮಿಗಳನ್ನು ಉತ್ಪಾದನೆ ಮಾಡಿರುವ ವಿವರ ಈ ಕೆಳಕಂಡಂತಿದೆ.<br><br><table><tr><th>ಕ್ರಸಂ</th><th>ಗಣಿಯ ಹೆಸರು</th><th>ಉತ್ಪಾದನೆ</th></tr><tr><td>1.</td><td>ವಡ್ಡರಹಳ್ಳಿ</td><td>791 ಘನ ಮೀಟರ್</td></tr><tr><td></td><td>ಒಟ್ಟು</td><td>791 ಘನ ಮೀಟರ್</td></tr></table><br>ಕಳೆದ 5 ವರ್ಷಗಳಲ್ಲಿ (ಮಾರ್ಚ್ – 2019 ರವರೆಗೆ) ಗುತ್ತಿಗೆದಾರರಿಂದ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಉತ್ಪಾದನೆ ಮಾಡಲಾದ ಕಬ್ಬಿಣದ ಅದಿರಿನ ವಿವರ ಈ ಕೆಳಕಂಡಂತಿದೆ.<br><br><table><tr><th>ಕ್ರಸಂ</th><th>ಗಣಿಯ ಹೆಸರು</th><th>ಅದಿರುಉತ್ಪಾದನೆ (ಮೆ. ಟನ್‌ಗಳಲ್ಲಿ)</th></tr><tr><td>1.</td><td>ತಿಮ್ಮಪ್ಪನಗುಡಿ</td><td>3734623</td></tr><tr><td>2.</td><td>ಸುಬ್ಬರಾಯನಹಳ್ಳಿ</td><td>8943938</td></tr><tr><td></td><td>ಒಟ್ಟು</td><td>12678561</td></tr></table></td></tr>
</table>

<table>
<tr><td></td><td></td><td>ಕಳೆದ 05 ವರ್ಷಗಳಲ್ಲಿ ಸಂಸ್ಥೆಯು ಒಟ್ಟಾರೆ ಗಳಿಸಿದ ನಿವ್ವಳ ಆದಾಯದ ವಿವರ ಕೆಳಕಂಡಂತಿದೆ.<br>(ತೆರಿಗೆ ನಂತರ, ರೂ. ಕೋಟಿಗಳಲ್ಲಿ)
<table>
<tr><td>2014-</td><td>2015-</td><td>2016-</td><td>2017-18</td><td>2018-19</td></tr>
<tr><td>280.88</td><td>245.46</td><td>316.13</td><td>306.24</td><td>19.82</td></tr>
</table>
</td></tr>
<tr><td>ಇ)</td><td>ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮದ ವತಿಯಿಂದ ಎಷ್ಟು ಸಂಸ್ಥೆಗಳಿಗೆ ಗುತ್ತಿಗೆಯನ್ನು ಬಿಟ್ಟುಕೊಡಲಾಗಿದೆ; ಮತ್ತು ಗುತ್ತಿಗೆಯನ್ನು ವರ್ಗಾಯಿಸಲಾಗಿದೆ? (ಸಂಪೂರ್ಣ ವಿವರ ನೀಡುವುದು)</td><td>ಸರ್ಕಾರದ ಆದೇಶಗಳನ್ವಯ ವರ್ಗಾಹಿಸಲಾದ ಗುತ್ತಿಗೆಗಳ ವಿವರವನ್ನು ಅನುಬಂಧ – 3 ರಲ್ಲಿ ಲಗತ್ತಿಸಿದೆ. ಕೆಳಕಂಡಂತಿದೆ.<br>1) 03 ಸುಣ್ಣದಕಲ್ಲಿನ ಗಣಿಗುತ್ತಿಗೆ ಪ್ರದೇಶಗಳನ್ನು ಮೆ॥ ಕಾನೋರಿಯಾ ಇಂಡಸ್ಟ್ರೀಸ್ ರವರಿಗೆ 1995 ನೇ ಇಸವಿಯಲ್ಲಿ ವರ್ಗಾಯಿಸಲಾಗಿದೆ.<br>2) 01 ಸುಣ್ಣದಕಲ್ಲಿನ ಗಣಿಗುತ್ತಿಗೆ ಪ್ರದೇಶವನ್ನು ಮೆ॥ ಮದ್ರಾಸ್ ಸಿಮೆಂಟ್ ರವರಿಗೆ 2005 ನೇ ಇಸವಿಯಲ್ಲಿ ವರ್ಗಾಯಿಸಲಾಗಿದೆ.<br>3) 02 ಸುಣ್ಣದಕಲ್ಲಿನ ಗಣಿಗುತ್ತಿಗೆ ಪ್ರದೇಶಗಳನ್ನು ಮೆ॥ ಜೆ.ಕೆ.ಸಿಮೆಂಟ್ ರವರಿಗೆ 2002 ನೇ ಇಸವಿಯಲ್ಲಿ ವರ್ಗಾಯಿಸಲಾಗಿದೆ. ಮತ್ತು 05 ಕಬ್ಬಿಣ ಅದಿರು ಗಣಿಗುತ್ತಿಗೆ ಪ್ರದೇಶಗಳನ್ನು ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿ., ರವರಿಗೆ 1985 ನೇ ಇಸವಿಯಲ್ಲಿ ವರ್ಗಾಯಿಸಲಾಗಿದೆ ವಿವರ **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.</td></tr>
</table>

ಸಂಖ್ಯೆ: ಸಿಐ 12 ಎಂಪಿಪಿ 2020

( ಸಿ.ಸಿ ಪಾಟೀಲ್ )
ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವರು.

# ಅನುಬಂಧ –1

ಸಂಸ್ಥೆಯು ತನ್ನ ಅಧೀನದಲ್ಲಿರುವ ಗ್ರಾನೈಟ್ ಶಿಲಾ ಗಣಿಗಳಲ್ಲಿ ಶಿಲಾದಿಮ್ಮಿಗಳನ್ನು ಉತ್ಪಾದನೆ ಮಾಡಲು ಇ-ಟೆಂಡರ್ ಮೂಲಕ ಕಳೆದ ಐದು ವರ್ಷಗಳಲ್ಲಿ 01 ಕಂಪನಿಯ ಜೊತೆ ಗುತ್ತಿಗೆ ಕರಾರು ಮಾಡಿಕೊಂಡಿದ್ದು, ಗುತ್ತಿಗೆವಾರು / ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ. | ಗಣಿಯ ಹೆಸರು | ಜಿಲ್ಲೆ | ವಿಸ್ತೀರ್ಣ (ಎಕರೆಗಳಲ್ಲಿ) | ಗುತ್ತಿಗೆದಾರರ ಹೆಸರು | ಅವಧಿ |
|---|---|---|---|---|---|
| 1.. | ವಡ್ಡರಹಳ್ಳಿ | ಹಾಸನ | 13.25 | ಪ್ರಥಮ್ ಗ್ರಾನೈಟ್ಸ್ | 14.02.2017 ರಿಂದ 3 ವರ್ಷಗಳಿದ್ದು, ಒಂದು ವರ್ಷದ ನಂತರ ಕರಾರನ್ನು ರದ್ದುಗೊಳಿಸಲಾಗಿದೆ. |

ಉಪ ಪ್ರಧಾನ ವ್ಯವಸ್ಥಾಪಕರು (ಉತ್ಪಾದನೆ)

# ಅನುಬಂಧ –2

ಸಂಸ್ಥೆಯ ಅಧೀನದಲ್ಲಿರುವ ಕಬ್ಬಿಣದ ಅದಿರು ಗಣಿಗಳಲ್ಲಿ ಕಳೆದ 5 ವರ್ಷಗಳಲ್ಲಿ ಇ-ಟೆಂಡರ್ ಮೂಲಕ ಯಂತ್ರೋಪಕರಣಗಳನ್ನು ಬಾಡಿಗೆ ಆದಾರದ ಮೇಲೆ ಪಡೆದು ಅದಿರನ್ನು ಉತ್ಪಾದಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ಗಣಿಯ ಹೆಸರು | ಜಿಲ್ಲೆ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಆರ್.ಓ.ಎಂ. ಅದಿರು ಉತ್ಪಾದನೆಗಾಗಿ ಯಂತ್ರೋಪಕರಣಗಳನ್ನು ನೀಡಿರುವ ಗುತ್ತಿಗೆದಾರರ ಹೆಸರು | ಕರಾರು ಅವಧಿ | ಅದಿರು ಸಂಸ್ಕರಣೆಗಾಗಿ ಯಂತ್ರೋಪಕರಣಗಳನ್ನು ನೀಡಿರುವ ಗುತ್ತಿಗೆದಾರರ ಹೆಸರು | ಕರಾರಿನ ಅವಧಿ |
|---|---|---|---|---|---|---|---|
| 1 | ತಿಮ್ಮಪ್ಪನಗುಡಿ ಕಬ್ಬಿಣದ ಅದಿರು ಗಣಿ | ಬಳ್ಳಾರಿ | 136.14 | 1) ಮೆ:ಸೌತ್ ವೆಸ್ಟ್ ಮೈನಿಂಗ್ ಲಿ., | 26.11.2014 ರಿಂದ 31.03.2017 | ವಿಶಾಲ್ ಎಂಟರ್ ಪ್ರೈಸಸ್ | 26.11.2014 ರಿಂದ 31.03.2017 |
| | | | | 2) ಪ್ರವೀಣ್ ಪ್ರಾಜೆಕ್ಟ್ | 22.05.2017 ರಿಂದ 15.12.2018 | ವಿಶಾಲ್ ಎಂಟರ್ ಪ್ರೈಸಸ್ | 01.04.2017 ರಿಂದ 31.03.2020 |
| | | | | 3)ಅಮಿತ್ ಅರ್ಥ್ ಮೂವರ್ಸ್, | 14.08.2018 ರಿಂದ 31.03.2019 | ವಿಶಾಲ್ ಎಂಟರ್ ಪ್ರೈಸಸ್ | 01.04.2017 ರಿಂದ 31.03.2020 |
| 2 | ಸುಬ್ಬರಾಯನಹಳ್ಳಿ ಕಬ್ಬಿಣದ ಅದಿರು ಗಣಿ | ಬಳ್ಳಾರಿ | 80.06 | 1) ಎಸ್.ಎಸ್.ಮುಚಂಡಿ, | 26.11.2014 ರಿಂದ 31.03.2017 | ವಿಶಾಲ್ ಎಂಟರ್ ಪ್ರೈಸಸ್ | 26.11.2014 ರಿಂದ 31.03.2017 |
| | | | | 2)ಕೆ.ಬಿ.ಎನ್.ಎಂಟರ್ ಪ್ರೈಸಸ್ | 22.05.2017 ರಿಂದ 31.03.2020 | ವಿಶಾಲ್ ಎಂಟರ್ ಪ್ರೈಸಸ್ | 22.05.2017 ರಿಂದ 31.03.2020 |

ಉಪ ಪ್ರಧಾನ ವ್ಯವಸ್ಥಾಪಕರು (ಉತ್ಪಾದನೆ)

ಅನುಬಂಧ - ೩

## ಕರ್ನಾಟಕ ಸರ್ಕಾರದ ಆದೇಶದಂತೆ ಈ ಕೆಳಕಾಣಿಸಿದ ಗುತ್ತಿಗೆ ಪ್ರದೇಶಗಳನ್ನು ವರ್ಗಾವಣೆ ಮಾಡಲಾಗಿರುತ್ತದೆ.

| ಕ್ರಮ ಸಂಖ್ಯೆ | ಖನಿಜ, | ವರ್ಗಾವಣೆಗೊಂಡ ಗುತ್ತಿಗೆ ವಿಸ್ತೀರ್ಣ | ವರ್ಗಾವಣೆ ಪಡೆದ ಸಂಸ್ಥೆ | ವರ್ಗಾವಣೆಗೊಂಡ ವರ್ಷ |
|---|---|---|---|---|
| 1. | ಸುಣ್ಣದ ಕಲ್ಲು | ಕಲಾದಗಿ ಗಣಿ ಗುತ್ತಿಗೆ ಸಂಖ್ಯೆ: 1733 ರ ವಿಸ್ತೀರ್ಣ 1200 ಎಕರೆ | ಮೆ॥ ಕಾನೋರಿಯಾ ಇಂಡಸ್ಟ್ರೀಸ್ | 1996 |
| 2. | ಸುಣ್ಣದ ಕಲ್ಲು | ಜಾಲಿಕಟ್ಟೆ ಗಣಿ ಗುತ್ತಿಗೆ ಸಂಖ್ಯೆ: 1685 ರ ವಿಸ್ತೀರ್ಣ 1200 ಎಕರೆ | ಮೆ॥ ಕಾನೋರಿಯಾ ಇಂಡಸ್ಟ್ರೀಸ್ | 1996 |
| 3. | ಸುಣ್ಣದ ಕಲ್ಲು | ಕಜ್ಜಿದೋಣಿ ಗಣಿ ಗುತ್ತಿಗೆ ಸಂಖ್ಯೆ: 1683 ರ ವಿಸ್ತೀರ್ಣ 560 ಎಕರೆ | ಮೆ॥ ಕಾನೋರಿಯಾ ಇಂಡಸ್ಟ್ರೀಸ್ | 1996 |
| 4. | ಸುಣ್ಣದ ಕಲ್ಲು | ಮತ್ತೋಡ್ ಗಣಿ ಗುತ್ತಿಗೆ ಸಂಖ್ಯೆ: 1742 ರ ವಿಸ್ತೀರ್ಣ 111.30 ಹೆಕ್ಟೇರ್ | ಮೆ॥ ಮದ್ರಾಸ್ ಸಿಮೆಂಟ್ | 2002 |
| 5. | ಸುಣ್ಣದ ಕಲ್ಲು | ಹಲ್ಲಿಸಿಂಗಾಪುರ ಗಣಿ ಗುತ್ತಿಗೆ ಸಂಖ್ಯೆ: 2344 ರ ವಿಸ್ತೀರ್ಣ 307 ಎಕರೆ | ಮೆ॥ ಜೆ.ಕೆ. ಸಿಮೆಂಟ್ | 2002 |
| 6. | ಸುಣ್ಣದ ಕಲ್ಲು | ಮುದ್ದಾಪುರ ಗಣಿ ಗುತ್ತಿಗೆ ಸಂಖ್ಯೆ: 2343 ರ ವಿಸ್ತೀರ್ಣ 400 ಎಕರೆ | ಮೆ॥ ಜೆ.ಕೆ. ಸಿಮೆಂಟ್ | 2002 |
| 7. | ಕಬ್ಬಿಣ ಅದಿರು ಗಣಿ | ಅಪ್ಪೇನಹಳ್ಳಿ ಗಣಿ ಗುತ್ತಿಗೆ ಸಂಖ್ಯೆ: 987 ರ ವಿಸ್ತೀರ್ಣ 539.93 ಎಕರೆ | ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿಮಿಟೆಡ್ ಗೆ ವರ್ಗಾಯಿಸಿರುತ್ತದೆ. | 1985 |
| 8. | ಕಬ್ಬಿಣ ಅದಿರು ಗಣಿ | ದೋಣಿಮಲೈ ಗಣಿ ಗುತ್ತಿಗೆ ಸಂಖ್ಯೆ: 1646 ರ ವಿಸ್ತೀರ್ಣ 1800 ಎಕರೆ | ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿಮಿಟೆಡ್ ಗೆ ವರ್ಗಾಯಿಸಿರುತ್ತದೆ. | 1985 |
| 9. | ಕಬ್ಬಿಣ ಅದಿರು ಗಣಿ | ದೋಣಿಮಲೈ ಗಣಿ ಗುತ್ತಿಗೆ ಸಂಖ್ಯೆ: 1703 ರ ವಿಸ್ತೀರ್ಣ 200 ಎಕರೆ | ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿಮಿಟೆಡ್ ಗೆ ವರ್ಗಾಯಿಸಿರುತ್ತದೆ. | 1985 |
| 10. | ಕಬ್ಬಿಣ ಅದಿರು ಗಣಿ | ಉಬ್ಬಲಗುಂಡಿ ಗಣಿ ಗುತ್ತಿಗೆ ಸಂಖ್ಯೆ: 899 ರ ವಿಸ್ತೀರ್ಣ 170 ಎಕರೆ | ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿಮಿಟೆಡ್ ಗೆ ವರ್ಗಾಯಿಸಿರುತ್ತದೆ. | 1985 |
| 11. | ಕಬ್ಬಿಣ ಅದಿರು ಗಣಿ | ಸಂಡೂರ್ ಫಾರೆಸ್ಟ್ ಗಣಿ ಗುತ್ತಿಗೆ ಸಂಖ್ಯೆ: 475 ರ ವಿಸ್ತೀರ್ಣ 200 ಎಕರೆ | ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿಮಿಟೆಡ್ ಗೆ ವರ್ಗಾಯಿಸಿರುತ್ತದೆ. | 1985 |

Manager (L&E)
Karnataka State Minerals Corporation Limited